

ತನ್ನದೇ ಆದ ಹಣದ ಸೆಲೆಯನ್ನು ಹೊಂದಿದ್ದಳು. ಯಾರ ಬಳಿಯೂ ಕೈ ಚಾಚದೆ ನಸೀಮಾಳ ಮದುವೆ ಮಾಡುವ ಮತ್ತು ಅವಳ ಸಂಸಾರವನ್ನು ಯಾರಿಗೂ ಕಮ್ಮಿ ಇಲ್ಲದಂತೆ ಸ್ಥಿರಗೊಳಿಸುವ ಆಶಯವನ್ನು ಕಾರ್ಯಗತಗೊಳಿಸುವ ಉತ್ಸಾಹ ಮತ್ತು ಧೈರ್ಯ ಅವಳಲ್ಲಿತ್ತು. ಹೀಗಾಗಿ ತನ್ನ ಗಂಡುಮಕ್ಕಳ ವಿರೋಧವನ್ನು ಕೂಡ ಲೆಕ್ಕಿಸದೆ ಅವಳು ಸಮೀರ್‌ನೊಡನೆ ನಸೀಮಾಳ ಮದುವೆಯನ್ನು ಗೊತ್ತು ಪಡಿಸಿದಳು. ಅಯ್ಯೋ! ಅಂತಸ್ತು ಇಲ್ಲದಿದ್ದರೆ ಏನಾಯ್ತು? ಸಾಕಷ್ಟು ಹಣವಿದ್ದು ವ್ಯವಹಾರದಲ್ಲಿ ವೃದ್ಧಿಯಾದರೆ ಅಂತಸ್ತು ತಾನಾಗಿಯೇ ಬರುತ್ತದೆ ಎಂದು ಅವಳು ನಿರ್ಧರಿಸಿದ ನಂತರ ಅವಳ ಮನೆ ಸಂಭ್ರಮದ ಬೀಡಾಯಿತು.

ನಸೀಮಾಳ ಮದುವೆಯ ಶಾಪಿಂಗ್‌ನಲ್ಲಿ ಅವಳು ಯಾವುದೇ ಕೊರತೆಯನ್ನು ಮಾಡಲಿಲ್ಲ. ಹುಟ್ಟಿದ ಸ್ವಂತ ಮಗಳಿಗೂ ಕೂಡ ತವರು ಮನೆಯವರು ಅಷ್ಟೊಂದು ಒಡವೆ ವಸ್ತ್ರ, ಫರ್ನಿಚರ್ ಕೊಡುವುದಿಲ್ಲವೆಂದು ಎಲ್ಲರೂ ಹುಬ್ಬೇರಿಸಿದರು. ಯಾವುದನ್ನು ವರ್ಣಿಸಬೇಕು ಯಾವುದನ್ನು ಬಿಡಬೇಕು ಎಂದು ಕೆಲವರು ಸಂತೋಷ ಪಟ್ಟರೆ, ಅನೇಕ ಆಪ್ತೇಷ್ಟರು ಹೊಟ್ಟೆಕಿಚ್ಚಿನಿಂದ ಉರಿದುಹೋದರು. ಮದುವೆಯ ನಂತರದ ಐದು ಶುಕ್ರವಾರ ಕಳೆದ ನಂತರ ಐದನೇ ಶುಕ್ರವಾರದ ಜುಮ್ಮಾಗೆ ಶಾಸ್ತ್ರವನ್ನು ಮಾಡಿ ಆಕೆಯನ್ನು ಶಾಸ್ತ್ರೋಕ್ತವಾಗಿ ಬೇರೆ ಮನೆಗೆ ಕಳಿಸಬೇಕೆಂದು ಆಕೆ ನಿರ್ಧರಿಸಿದ್ದು, ತಮ್ಮ ಮನೆಯಿಂದ ಒಂದೆರಡು ಮನೆಗಳ ಅಂತರದಲ್ಲಿದ್ದ ಮಹಡಿಯ ಮನೆಯನ್ನು ಬಾಡಿಗೆಗೆ ಕೂಡ ಪಡೆದಿದ್ದಳು. ಆದರೆ, ಐದನೇ ಶುಕ್ರವಾರ ಕಳೆಯುವುದರೊಳಗೆ ನಸೀಮಾ ಗರ್ಭಿಣಿಯಾಗಿರುವಳು ಎಂಬ ಸತ್ಯವನ್ನು ಕ್ಷಣಾರ್ಧದಲ್ಲಿ ಅವಳು ಕಂಡುಕೊಂಡಳು. ಇನ್ನೇನು ಬೇಕು— ನಸೀಮಾಳ ತಾಯ್ತನದ ಸಕಲ ಮಜಲುಗಳು ಕೂಡ ಮೇರೆ ಮೀರಿ ಹರಿದು ಜೀನತ್ ಸಂಭ್ರಮಿಸಿದಳು. ಗರ್ಭಿಣಿ ಮಹಡಿಯನ್ನು ಹತ್ತಿ ಇಳಿಯುವುದು ಸೂಕ್ತವಲ್ಲ ಎಂದು ಆಲೋಚನೆ ಮಾಡಿದ ಅವಳು ನಸೀಮಾಳನ್ನು ತನ್ನ ಬಳಿಯೇ ಇರಿಸಿಕೊಂಡಳು. ನಸೀಮಾ ಆಕೆಯ ಕಣ್ಣಗೊಂಬೆಯಾಗಿದ್ದಳು. ಆದರೆ, ಎಲ್ಲೋ ಒಂದು ಕಡೆ ನಸೀಮಾಳ ಪರಕೀಯತೆ ಸುಪ್ತವಾಗಿ ವ್ಯಕ್ತವಾಗುತ್ತಿದ್ದುದನ್ನು ಅವಳು ಗಮನಿಸಿದಳು. ತುಟಿ ಬಿಚ್ಚದೆ ಮೌನಗೌರಿಯಾಗಿ ಉಳಿದ ನಸೀಮಾಳಿಗೆ ಆಗಾಗ್ಗೆ ಮುಳ್ಳು ಗಿಡದ ಹೂವುಗಳ ಸುವಾಸನೆ ಬರತೊಡಗಿತು. ಸಂಬಂಧಗಳ ಆಳ ಅಗಲಗಳು ಪಾತ್ರ ಬದಲಾಯಿಸ ತೊಡಗಿದವು. ಕನಸುಗಳು ಗುಳೆ ಹೊರಟಿದ್ದವು.

ಬಾಡಿಗೆ ಮನೆಯಲ್ಲಿ ಸಮೀರ್ ಮತ್ತು ಆತನ ತಾಯಿ ಮಾತ್ರ ಉಳಿದರು. ಮದುವೆಯಾಗುವುದಕ್ಕಿಂತ ಮುಂಚೆ ನಸೀಮಾಳಿಗೆ ಮೀಸಲಿದ್ದ ಕೋಣೆಯಲ್ಲಿಯೇ ಸಮೀರ್ ವಾಸ್ತವ್ಯವನ್ನು ಹೂಡಿದ. ಏಳನೇ ತಿಂಗಳು ಕಳೆದ ನಂತರ ಅವಳು ಮತ್ತು ನಸೀಮಾ ಸೇರಿ ಮಗುವಿನ ವಸ್ತುಗಳನ್ನು ಖರೀದಿಸಲು ಆರಂಭಿಸಿದರು. ತೊಟ್ಟಿಲು ಮತ್ತು ಇನ್ನಿತರ ಆಟಿಕೆಗಳೊಂದಿಗೆ ಕಂಡದ್ದೆಲ್ಲವನ್ನೂ ಆಕೆ ಸಮೀರನ ಮನೆಗೆ ಸಾಗಿಸಿದಳು. ಜೋಗುಳದ ಉತ್ಕಟ ವಾತ್ಸಲ್ಯದ ಧ್ವನಿಯು ಅವಳ ನರನಾಡಿಗಳನ್ನು ಉತ್ತೇಜಿಸಿದವು. ಇಷ್ಟೆಲ್ಲಾ ಆಗುತ್ತಿದ್ದ ವೇಳೆಯಲ್ಲಿಯೂ ಕೂಡ ಆಕೆಗೆ ಒಮ್ಮೊಮ್ಮೆ ನಸೀಮಾಳ ಆರೋಗ್ಯದ ಬಗ್ಗೆ ಅಪಾರ ಚಿಂತೆಯಾಗುತ್ತಿತ್ತು. ಚೊಚ್ಚಿಲ ಗರ್ಭಿಣಿ ತನ್ನ ಆರೈಕೆಯಲ್ಲಿ ಹೇಗೆ ಕಳೆ ಕಳೆಯಾಗಿ ರಕ್ತ ಚಿಮ್ಮುವಂತೆ ಇರಬೇಕು. ಆದರೆ, ಅವಳು ಯಾಕೆ ಸೊರಗುತ್ತಿದ್ದಾಳೆ ಎಂದು ಆಕೆ ಚಿಂತಿತಳಾದಳು. ಎಂಟನೆಯ ತಿಂಗಳಿನಲ್ಲಿಯಂತೂ ಆಕೆ ತೀವ್ರ ನಿಶ್ಶಕ್ತಿಯಿಂದ ಬಳಲಿ, ಒಂದೆರಡು ಬಾರಿ ಆಕೆಯನ್ನು ಆಸ್ಪತ್ರೆಗೆ ದಾಖಲು ಮಾಡಿದರು. ನಸೀಮಾಳ ಪ್ರತಿರೋಧವನ್ನು ಕೂಡ ಲೆಕ್ಕಿಸದೆ ಜೀನತ್ ನಿಯಮಿತವಾಗಿ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ ಹಣ ಖರ್ಚು ಮಾಡುತ್ತಿದ್ದಳು. ಹೆರಿಗೆಯ ಸಲುವಾಗಿ ನಸೀಮಾಗೆ ವಾರ್ಡ್ ಅನ್ನು ಕೂಡ ಖಾಸಗಿ ಆಸ್ಪತ್ರೆಯಲ್ಲಿ ಆಕೆ ಮುಂಗಡವಾಗಿ ಕಾದಿರಿಸಿದ್ದಳು. ಆಕೆಯ ಗಾಬರಿ ಮತ್ತು ಕಾಳಜಿ ಎರಡನ್ನು ಗಮನಿಸಿದ ವೈದ್ಯರು ಹದಿನೈದು ದಿನ